ಎಂ.ಎಸ್. ಮಧುಸೂದನ, ಬೆಂಗಳೂರು
*ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿಯೂ ಸರ್ವೀಸ್ ಸಿಗುವುದು ಯಾರಿಗೆ?*




ಡ್ಯೂಟಿಯ ಮೇಲೆ ಬಂದು ಬಿಟ್ಟಿ ತಿನ್ನುವ ಪೇದೆಗಳಿಗೆ, ಹೆಲ್ತ್ ಇನ್‌ಸ್ಪೆಕ್ಟರ್‌ಗಳಿಗೆ.

ಎಚ್.ಆರ್. ದೇಸಾಯಿ, ರಾಯಚೂರು
*ನಮ್ಮ ಜೀವನ ನಾಟಕದ ಮೊದಲನೇ ಬೆಲ್, ಎರಡನೇ ಬೆಲ್ ಮತ್ತು ಮೂರನೇ ಬೆಲ್ ಯಾವಾಗ?*
ಜೀವನ ನಾಟಕದ್ದು ಬೆಲ್ ಅಲ್ಲ, ಬಿಲ್! ಆಗಮನಕ್ಕೊಂದು, ಅಸ್ತಿತ್ವಕ್ಕೊಂದು, ಅನಿವಾರ್ಯಕ್ಕೊಂದು.

ಬಾ.ರಂ. ಸುರೇಶ್, ಶಿವಮೊಗ್ಗ
*ಹೆಂಡತಿಯನ್ನು ಕಂಟ್ರೋಲ್‌ನಲ್ಲಿಟ್ಟುಕೊಳ್ಳಲು ನಿಮ್ಮ ಹತ್ತಿರ ಏನಾದರೂ ಉಪಾಯವಿದೆಯಾ?*
ಇದ್ದರೂ ನಿಮಗೆ ಪ್ರಯೋಜನವಿಲ್ಲ; ಪ್ರತಿ ದೀಪಕ್ಕೂ ಅದರದೇ ಆದ ಪ್ರತ್ಯೇಕ ಸ್ವಿಚ್.

ಶಿವಕುಮಾರ ಪತ್ರಿಮಠ, ಶೋರಾಪೂರ
*ದೇವತೆಗಳಿಗೂ ಇಬ್ಬರು ಹೆಂಡಿರ ಆಸೆಯೇಕೆ?*



ಪರಾಶಕ್ತಿಗಳಲ್ಲವೇ; ಒಂದೆಡೆ ಮಾತ್ರ ಇದ್ದರೆ ಬ್ಯಾಲೆನ್ಸ್ ತಪ್ಪಿಬಿಡುತ್ತದಂತೆ.

ಕೆ.ಎಂ. ಲಿಂಗರಾಜು, ನಂಜನಗೂಡು
*ಚುನಾವಣೆ ರಾಜಕಾರಣಿಗಳಿಗೆ ಪರೀಕ್ಷೆ ಇದ್ದಂತೆ. ಮತದಾರರಿಗೆ?*
ಪಿಕ್‌ನಿಕ್.

ಅನಂತಪದ್ಮನಾಭ ಹೆಚ್.ಎಂ. ಮೈಸೂರು
*ಇಂದಿನ ಜೆಟ್‌ಯುಗದಲ್ಲೂ ಮಗು ಹುಟ್ಟುವುದಕ್ಕೆ 9 ತಿಂಗಳು ದೀರ್ಘವಾಯಿತಲ್ಲವೆ?*
ಯುಗ ಜೆಟ್‌ದಾದರೂ ಮಗು ಅದೇ ಓಲ್ಡ್ ಮಾಡೆಲ್ ಅಲ್ಲವೇ.

ಎಚ್.ಜಿ. ಜಗದೀಶ್, ಮೈಸೂರು
*ಮನೆ ತಿಂಡಿಗಿಂತ ಹೋಟೆಲ್ ತಿಂಡಿ ಹೆಚ್ಚು ರುಚಿಕರ ಕಾರಣ?*
ರಸದಿಂದ ಬಂದ ರಸಕ್ಕಿಂತ ಕಸದಿಂದ ಬಂದ ರಸವೇ ರುಚಿಕರವಂತೆ!

ಪಿ.ಜೆ. ರಾಘವೇಂದ್ರ, ಮೈಸೂರು
*ಹುಟ್ಟು ಹಬ್ಬವಾದರೆ ಸಾವು?*
ಬೊಂಬೂ ಸವಾರಿ.

ಸವಿತಾ ರವಿ ಸುಟ್ಟಟ್ಟಿ, ಜಮಖಂಡಿ
*ಪ್ರೀತಿ, ಪ್ರೇಮ, ಸ್ನೇಹಗಳಲ್ಲಿ ನಿಷ್ಕಲ್ಮಶವಾದುದು ಯಾವುದು?*
ಪ್ರೀತಿಯೇ – ಮನುಷ್ಯರತ್ತ ಹಸು, ಕರು, ನಾಯಿಗಳಂತಹ ಸಾಕುಪ್ರಾಣಿಗಳು ತೋರುವ ಪ್ರೀತಿ.

ಅಶೋಕ ಸಿನ್ನೂರ, ಅಮೀನಗಡ
*ಲವ್ ಮಾಡಬೇಕೆಂದಿದ್ದೇನೆ. ಆದರೆ ಧೈರ್ಯ ಬರುತ್ತಿಲ್ಲ. ಏನು ಮಾಡಬೇಕು ಗುರುವರ್ಯ?*
ಹಿರಿಯರು ತೋರಿಸಿದ ದಿಟ್ಟ ಹೆಣ್ಣಿನ ಪಾದಕ್ಕೆ ವಂದಿಸಿ ಜೀವನಪರ್ಯಂತ ಹೆನ್‌ಪೆಕ್ಡ್ ಹಸ್ಬೆಂಡ್ ಆಗಿ ಸಂತೋಷದಿಂದ ಬಾಳು ಸಿಸ್ಯಾ.

ಆರ್. ಮಧುಸೂದನ್, ಹಾಸನ
*ನಮ್ಮೂರಿನ ಜನ ಅಮಾವಾಸ್ಯೆಯ ದಿನ ಗುಂಡು ಹಾಕುವುದಿಲ್ಲವಲ್ಲ, ಯಾಕೆ?*
ಚತುರ್ದಶಿಯ ಕಿಕ್ಕೇ ಇಳಿದಿರುವುದಿಲ್ಲವಂತೆ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಮನೆಯ ಹೆಸರಿಗೆ ಸಾಮಾನ್ಯವಾಗಿ ಸೂರ್ಯನ ಹೆಸರಿಡುತ್ತಾರೆ. ಚಂದ್ರನ ಹೆಸರು ಇಡದಿರಲು ಕಾರಣವೇನು?*
ಸೂರ್ಯನ ಹೆಸರಿಟ್ಟರೆ ಮನೆ ಬೆಚ್ಚಗಿರುತ್ತದೆ, ಚಂದ್ರನ ಹೆಸರಿಟ್ಟರೆ ಥಂಡಿಯಾಗಿ ಸೈನಸೈಟಿಸ್, ನ್ಯುಮೋನಿಯಾ ಆಗುವುದೆಂಬ ಭ್ರಮೆಯಂತೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಸುಂದರ, ಉಪಯುಕ್ತ ಮಾವಿನ ಮರಗಳಿಗೂ ತೋಪು ಎಂಬರು; ಹಾಳಾಗಿ, ನಷ್ಟವಾದುದನ್ನೇಕೆ ತೋಪು ಎಂಬರಯ್ಯಾ ರಾಮಯ್ಯಾ?*
ಒಂದು ತೋ – ತೋರಣಕ್ಕೆ, ಪು – ಪುರಸ್ಕೃತವಾದ ತೋಪು. ಇನ್ನೊಂದು ತೋ – ತೋರಿಕೆಗಳು, ಪು – ಪುಸಿಯಾದ ತೋಪು!

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ವ್ಯವಸಾಯ ಮಾಡುವವರೇಕೆ ತಮ್ಮ 'ವೆಡ್ಡಿಂಗ್ ಕಾರ್ಡ್'ನಲ್ಲಿ ತಾವು ಮಾಡುವ ವೃತ್ತಿಯನ್ನು ನಮೂದಿಸಿಕೊಳ್ಳುವುದಿಲ್ಲ?*
ನಿವೃತ್ತಿಯಿಲ್ಲದ್ದು ವೃತ್ತಿಯಲ್ಲದೆ ಪ್ರವೃತ್ತಿಯಾದ್ದರಿಂದ.

ಬಿ. ಚಂದ್ರೇಗೌಡ, ಬೆಂಗಳೂರು
*ಮಗುವಿನ ಮುಗ್ಧತೆ ದೊಡ್ಡವರಿಗೂ ಇದ್ದಿದ್ದರೆ ಹೇಗಿರುತ್ತಿತ್ತು?*
ಚಾಣಾಕ್ಷರ ಕೈಗೆ ಸಿಕ್ಕಿ, ತಲೆ ನುಣ್ಣಗಾಗಿ, ದಿನಕ್ಕೊಂದು ಹೊಸ ಟೋಪಿ ತಲೆಗೇರುತ್ತಿತ್ತು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸ್ವಾತಂತ್ರ್ಯ ದಿನಾಚರಣೆಯು ಇತ್ತೀಚೆಗೆ ಮಹಿಳೆಯರು ಮತ್ತು ಮಕ್ಕಳಿಗೇ ಸೀಮಿತವಾಗುತ್ತಿದೆಯಲ್ಲಾ ರಾಂಜೀ?*
ಸರಿಯೇ; ಮದುವೆಯಾದ ಗಂಡು ಸ್ವತಂತ್ರನೆಂದು ಕರೆದುಕೊಳ್ಳಲು ಲೈಸೆನ್ಸ್ ಇಲ್ಲ.

ಹಾಡ್ಯ ಬಿ. ಜಯಾನಂದ, ಮೈಸೂರು
*ಕೈಬಳೆ ಸದ್ದಿಗಿಂತ ಪಾತ್ರೆಗಳ ಸದ್ದೇ ಹೆಚ್ಚಾಗಿ ಕೇಳಿಸಿದರೆ ಏನು ಅರ್ಥ?*



ತಿಳಿಯಿತು; ಗಂಡಸು ಪಾತ್ರೆ ತೊಳೆಯುತ್ತಿದ್ದಾನೆ, ಹೆಂಗಸು ಎತ್ತಿಡುತ್ತಿದ್ದಾಳೆ.

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಕಣ್ಣು ತೆರೆಸುವ ಹೆಣ್ಣು ಸಾವಿರಕ್ಕೊಬ್ಬರೋ, ಲಕ್ಷಕ್ಕೊಬ್ಬರೋ, ಕೋಟಿಗೊಬ್ಬರೋ?*
ಹತ್ತು ಜನಕ್ಕೊಬ್ಬರು – ಕಣ್ಣಿಗೆ ಡ್ರಾಪ್ಸ್ ಹಾಕುವ ಸಲುವಾಗಿ – ಐ ಕ್ಲಿನಿಕ್‌ನಲ್ಲಿ!

ಕುಮಾರ ಚಲವಾದಿ, ಹೊಳೆನರಸಿಪುರ
*ನೀವು ನಮಗೆ ನೀಡುವ ಉತ್ತರಗಳಲ್ಲಿ ನಿಮ್ಮಾಕೆಯ ಪಾಲು ಎಷ್ಟು?*
ಅಷ್ಟೂ ಆಕೆಯ ಸ್ಫೂರ್ತಿ, ತರಬೇತಿಯದೇ; ಆಕೆ ಪ್ರಶ್ನೆ ವಿಶ್ವವಿದ್ಯಾಲಯ; ಆಕೆಗೆ ಉತ್ತರಿಸಿದ ಮೇಲೆ ನಿಮ್ಮ ಪ್ರಶ್ನೆಗಳು ಪ್ರಶ್ನೆಗಳೇ ಅಲ್ಲ!

■ ರಾಮ್